ಸೇವಂತಿ ಅಕ್ಕ 'ನೀವು ಚಪ್ಪಲಿ ತೆಗೆದು ಆ ಮಾಸ್ಟ್ರ ಮುಖಕ್ಕೆ ಬಾರಿಸಬೇಕಿತ್ತು' ಎಂದಿದ್ದರು. 'ಅದು ಸಾಲದು ಎನ್ನುವಂತೆ 'ನಾಳೆ ನಾನು ನಿಮ್ಮ ಜೊತೆ ಶಾಲೆಗೆ ಬಂದು ನಿಮ್ಮ ಹೆಡ್‌ಮಾಸ್ಟರಲ್ಲಿ 'ಹೌದಾ ಮಾಸ್ಟ್ರೇ ನೀವು ವಿಧವೆಯವರಿಗೆ ಮದುವೆ ಮಾಡಿಸುವ ಪೌರೋಹಿತ್ಯ ವಹಿಸಿಕೊಂಡದ್ದು ಯಾವಾಗಿನಿಂದ?' ಎಂದು ಕೇಳುತ್ತೇನೆ' ಎಂದಿದ್ದರು.

ಆಗ ಟೀಚರಮ್ಮ 'ಅಯ್ಯೋ ದೇವರೇ, ಅದೆಲ್ಲ ಬೇಡವೇ ಬೇಡ!' ಎಂದಿದ್ದರು. ಈ ಎಲ್ಲಾ ಹಿನ್ನೆಲೆಯಲ್ಲಿ ಯೋಚಿಸಿದಾಗ ತಾನು ಸೇವಂತಿ ಅಕ್ಕನಿಗೆ ಮಾವಿನ ಗಿಡ ಕೊಟ್ಟದ್ದು ಸರಿಯೇ ಎಂದು ಸಿಸಿಲಾ ಟೀಚರಮ್ಮ ತನಗೆ ತಾನೆ ಸಮಾಧಾನ ಮಾಡಿಕೊಂಡು ಈ ವಿಷಯವನ್ನು ತಪ್ಪಿಯೂ ಮಗನಿಗೆ ಹೇಳದೇ ಮಗ 'ಗಿಡ ಹೇಗುಂಟು?' ಎಂದು ವಿಚಾರಿಸಿದಾಗ, 'ಒಂದು ಗಿಡ ಸತ್ತೇ ಹೋಯಿತು ಮಗನೇ' ಎಂದು ಸುಳ್ಳು ಹೇಳಿದ್ದರು. ಆದರೆ ಸೇವಂತಿ ಅಕ್ಕನ ಮನೆಯ ಗಿಡ ಚೆನ್ನಾಗಿ ಬೆಳೆಯಲಿ ಎಂದು ಟೀಚರಮ್ಮ ಸದಾ ಮನಸ್ಸಿನೊಳಗೇ ಹಾರೈಸುತ್ತಿದ್ದರು.

ಸಿರಿಲ್ ಮರುವರುಷ ಊರಿಗೆ ಬರುವಾಗ, ಕಳೆದ ವರುಷ ಮಾವಿನಹಣ್ಣು ಮಾರುತ್ತಿದ್ದವನು ಮದ್ರಾಸ್ ರೈಲ್ವೆ ಸ್ಟೇಶನ್ನಿನಲ್ಲಿ ಎಲ್ಲಾದರೂ ಇದ್ದಾನೋ ಎಂದು ಸ್ಟೇಶನ್ನಿನ ಉದ್ದಕ್ಕೂ ಹೋಗಿ ಹೊರಗಿನ ರಸ್ತೆ ಬದಿಯ ಅಂಗಡಿಗಳನ್ನೂ ವಿಚಾರಿಸಿದ. ಹಿಂದೆ ಹಣ್ಣು ಮಾರಿದವನ ಗುರುತು ಇಲ್ಲದಿದ್ದರೂ, ಆತನೊಡನೆ ಆಡಿದ ಮಾತುಕತೆಗಳ ಆಧಾರದಲ್ಲಿ ಮತ್ತು ಆ ಮಾವಿನಹಣ್ಣಿನ ಸೌಂದರ್ಯದ ನೆಲೆಯಲ್ಲಿ ಆ ಮಾರಾಟಗಾರನನ್ನು ಕಂಡು ಹಿಡಿಯಬಹುದೆನ್ನುವುದನ್ನು ಸಿರಿಲ್ ತರ್ಕಿಸಿದ್ದರೂ ಅದು ಆಗಲೇ ಇಲ್ಲ. ಆದರೂ ಸಿರಿಲ್ ಅಲ್ಲಿ ಇಲ್ಲಿ ಅವರಿವರನ್ನು ಪ್ರಶ್ನಿಸಿ ಕೊನೆಗೂ 'ಅದೇ ಇದು' ಇರಬಹುದು ಎಂದುಕೊಂಡು ಸ್ಟೇಶನ್ನಿನಲ್ಲಿ ಎರಡು ಕೆಜಿ ಮಾವಿನಹಣ್ಣುಗಳನ್ನು ಹಿಡಿದುಕೊಂಡು ತಾಯಿ ಇದ್ದಲ್ಲಿಗೆ ಬಂದಿದ್ದ. ಮಗ ತಂದ ಆ ಹಣ್ಣುಗಳನ್ನು ನೋಡಿದ ಕೂಡಲೇ ಸಿಸಿಲಾ ಟೀಚರಮ್ಮ 'ಇದು ಅದಲ್ಲ ಮಗss' ಎಂದರು. ಆಮೇಲೆ ಅದನ್ನು ತುಂಡರಿಸಿ ಕಚ್ಚಿ ತಿಂದು ರುಜುವಾತುಪಡಿಸಿದ್ದರು. ಆಗ ಸಿರಿಲ್ 'ಚಿಂತಿಲ್ಲ ಬಿಡು, ಒಂದು ಗಿಡವಾದರೂ ಉಂಟಲ್ಲ ಅಮ್ಮಾ' ಎಂದು ಆಕೆಯನ್ನು ಸಂತೈಸಿ 'ಆ ಗಿಡವೆಲ್ಲಿ?' ಎಂದು ಕೇಳಿದ. ಆಗ ಟೀಚರಮ್ಮ 'ಇದೇ ಅದು' ಎಂದು ತೋಟದಲ್ಲಿನ ಗಿಡವನ್ನು ತೋರಿಸಿದಾಗ ಸಿರಿಲ್ ಆ ಗಿಡದ ಎಲೆಗಳನ್ನು ಪ್ರೀತಿಯಿಂದ ನೇವರಿಸಿ 'ಒಂದು ವರುಷಕ್ಕೆ ಇದರ ಬೆಳವಣಿಗೆ ಸಾಕು ಎನ್ನುವ ಹಾಗಿದೆ ಅಮ್ಮ. ನೀನು ಸಾಧ್ಯವಾದರೆ ಎಲ್ಲಿಂದಾದರೂ ತಲಾಶ್ ಮಾಡಿ ಇದಕ್ಕೆ ಹಟ್ಟಿ ಗೊಬ್ಬರ ಹಾಕು. ಬರುವ ವರುಷ ಇದು ನನ್ನಷ್ಟು ಎತ್ತರಕ್ಕೆ ಬೆಳೆಯುತ್ತದೆ ನೋಡು' ಎಂದಿದ್ದ.

ಮರುದಿನ ಬೆಳಗ್ಗೆ ಸಿಸಿಲಾ ಟೀಚರಮ್ಮ ಏಳುವ ಮೊದಲೇ ಎದ್ದ ಸಿರಿಲ್ ಆ ಮಾವಿನ ಗಿಡದ ಬಳಿಗೆ ಹೋಗಿ ಅದಕ್ಕೆ ಮೂತ್ರ ಮಾಡುತ್ತಿದ್ದ. ಅದನ್ನು ನೋಡಿದ ಟೀಚರಮ್ಮ ಮುಗುಳುನಗುತ್ತಾ ಒಳಗೆ ಹೋಗಿ ಚಾ ಮಾಡಿ ತಂದು ಚಾವಡಿಗೆ ಮಗನನ್ನು ಕರೆದು 'ನೀನು ಸಣ್ಣದಿರುವಾಗ ಮಾಡುತ್ತಿದ್ದ ತಂಟೆಯನ್ನೇ ಈಗಲೂ ನಿಲ್ಲಿಸಿಲ್ಲವಲ್ಲ?' ಎಂದು ನಗುತ್ತಲೇ ಪ್ರಶ್ನಿಸಿದರು. 'ಹ್ಹೂ ಇದು ಅಂಥ ತಂಟೆ ಹೇಗೆ ಆಗುತ್ತದೆ?' ಎಂದು ಸಿರಿಲ್ ಕೇಳಿದಾಗ ಟೀಚರಮ್ಮ 'ಮಾವಿನಗಿಡಕ್ಕೆ ಮೂತ್ರ ಮಾಡುವುದು ತಂಟೆ ಅಲ್ಲದೆ ಮತ್ತೇನೋ?' ಎಂದರು. ಸಿರಿಲ್ ಗಂಭೀರವಾಗಿ 'ಇದು ತಂಟೆಯೂ ಅಲ್ಲ ತಕರಾರು ಅಲ್ಲ! ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಯಾವನೋ ಒಬ್ಬ ರಸ್ತೆ ಬದಿಯಲ್ಲಿ ಕಾರು ನಿಲ್ಲಿಸಿ ಒಬ್ಬಳು ಹೆಣ್ಮಗಳಲ್ಲಿ 'ನೀನು ಮೂತ್ರ ಮಾಡಿ ಸಾಕಿದ್ದಿಯೇನು ಆ ಮರವನ್ನು? ಅವು ಅವುಗಳಷ್ಟಕ್ಕೆ ಹುಟ್ಟಿ ಬೆಳೆದಿವೆ.